# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 61 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಅ.ದೇವೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 04.07.2023 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆ ವ್ಯಾಪ್ತಿಗೆ ಬರುವ ಉದ್ದಿಮೆಗಳಾವುವು; (ಮಾಹಿತಿ ಒದಗಿಸುವುದು) | ಭಾರತ ಸರ್ಕಾರದ ಎಂ.ಎಸ್.ಎಂ.ಇ ಸಚಿವಾಲಯವು ದಿನಾಂಕ: 01.07.2020 ರಿಂದ ಸಣ್ಣ ಕೈಗಾರಿಕೆಗಳಿಗೆ ಹೊಸ ವ್ಯಾಖ್ಯಾನವನ್ನು ನೀಡಿದ್ದು,ಯಾವ ಉತ್ಪಾದನಾ/ ಸೇವಾ ಕೈಗಾರಿಕೆಯು ತನ್ನ ಘಟಕದ ಸ್ಥಾವರ/ ಯಂತ್ರೋಪಕರಣಗಳಲ್ಲಿ ರೂ.10.00 ಕೋಟಿಗಿಂತ ಕಡಿಮೆ ಬಂಡವಾಳ ಹೂಡಿಕೆ ಮಾಡಿದ್ದು ಮತ್ತು ಆ ಘಟಕದ ವಾರ್ಷಿಕ ವಹಿವಾಟು ರೂ.50.00 ಕೋಟಿಗಿಂತ ಕಡಿಮೆ ಇದ್ದಲ್ಲಿ ಅದನ್ನು ಸಣ್ಣ ಕೈಗಾರಿಕೆ ಎಂದು ಪರಿಗಣಿಸಲಾಗುತ್ತದೆ. ಈ ವ್ಯಾಖ್ಯಾನದ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಎಲ್ಲಾ ಉತ್ಪಾದನಾ / ಸೇವಾ ಚಟುವಟಿಕೆಯ ಘಟಕಗಳು ಸಣ್ಣ ಕೈಗಾರಿಕಾ ವ್ಯಾಪ್ತಿಗೆ ಬರುತ್ತವೆ.<br><br>ಉದಾಹರಣೆ:<br><br>1. ಆಹಾರ ಸಂಸ್ಕರಣಾ ಘಟಕಗಳು<br>2. ಜವಳಿ ಮತ್ತು ಸಿದ್ದ ಉಡುಪು ತಯಾರಿಕಾ ಘಟಕಗಳು<br>3. ಇಂಜಿನಿಯರಿಂಗ್ ಘಟಕಗಳು<br>4. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪನ್ನ ತಯಾರಿಕಾ ಘಟಕಗಳು<br>5. ಔಷಧ ತಯಾರಿಕಾ ಘಟಕಗಳು<br>6. ರಸಾಯನಿಕ ಉತ್ಪನ್ನ ತಯಾರಿಕಾ ಘಟಕಗಳು |
| ಆ) | ಸಣ್ಣ ಕೈಗಾರಿಕೆ ಇಲಾಖೆ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು/ ಕಂಪನಿಗಳು, ಶಾಸನಬದ್ಧ ಮಂಡಳಿಗಳು, ಉದ್ದಿಮೆಗಳು, ಸೊಸೈಟಿಗಳು ಹಾಗೂ ಇತರೆ ಅಂಗ ಸಂಸ್ಥೆಗಳು ಯಾವುವು; | ಸಣ್ಣ ಕೈಗಾರಿಕೆ ಇಲಾಖೆ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು/ಕಂಪನಿಗಳು ಶಾಸನಬದ್ಧ ಮಂಡಳಿಗಳು, ಉದ್ದಿಮೆಗಳು ಸೊಸೈಟಿಗಳು ಹಾಗೂ ಇತರೆ ಅಂಗ ಸಂಸ್ಥೆಗಳು ಈ ಕೆಳಗಿನಂತಿವೆ:<br><br>1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಬೆಂಗಳೂರು<br>2. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು<br>3. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಬೆಂಗಳೂರು<br>4. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರಿ ಮಹಾಮಂಡಳಿ, ಬೆಂಗಳೂರು<br>5. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು<br>6. ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್, ಬೆಂಗಳೂರು<br>7. ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ, ಬೆಂಗಳೂರು<br>8. ಕರ್ನಾಟಕ ವೈಮಾನಿಕ ತಂತ್ರಜ್ಞಾನ ಕೇಂದ್ರ |

| | | |
|---|---|---|
| (ಇ) | ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕಾ ಘಟಕಗಳು ಪ್ರಾರಂಭವಾಗಿ ಕಾರ್ಯಾಚರಣೆಯಲ್ಲಿದೆ; ಇವುಗಳಿಗೆ ಸರ್ಕಾರ ವಿಧಿಸಿರುವ ಮಾನದಂಡಗಳೇನು? (ಮಾಹಿತಿ ಒದಗಿಸುವುದು) | ಭಾರತ ಸರ್ಕಾರದ "ಉದ್ಯಮ್ ರಿಜಿಸ್ಟ್ರೇಷನ್ ಪೋರ್ಟಲ್" ಪ್ರಕಾರ ದಿನಾಂಕ 24.06.2023 ರ ವರೆಗೆ ಒಟ್ಟು 9,73,833 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ನೊಂದಣಿಯಾಗಿರುತ್ತವೆ.<br><br>ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಅನುಮೋದನೆಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿಯಿಂದ ಪಡೆಯಬೇಕಾಗುತ್ತದೆ.<br><br>ರಾಜ್ಯದಲ್ಲಿ ಸಣ್ಣ ಸಣ್ಣ ಉದ್ಯಮಗಳನ್ನು ತೆರೆಯಲು ಉದ್ಯಮಶೀಲರು ಕನಿಷ್ಟ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸಬೇಕಾಗುತ್ತದೆ:<br><br>1. ಮಾಲೀಕತ್ವ ಉದ್ಯಮ ಸ್ಥಾಪಿಸಲು ಬಯಸುವ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದಲ್ಲಿ "ಕಾಮನ್ ಅಪ್ಲಿಕೇಷನ್ ಫಾರಂ" ನ್ನು ಭರ್ತಿ ಮಾಡಿ ಅರ್ಜಿಯನ್ನು ಸಂಬಂಧಿಸಿದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಸಲ್ಲಿಸಬೇಕಾಗುತ್ತದೆ.<br><br>2. ಜಿಲ್ಲಾ ಕೈಗಾರಿಕಾ ಕೇಂದ್ರವು ಈ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ "ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ" ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ತಾತ್ವಿಕ ಅನುಮೋದನಾ ಪತ್ರವನ್ನು ಉದ್ಯಮಶೀಲರಿಗೆ ನೀಡುತ್ತದೆ.<br><br>3. ನಂತರ ಉದ್ಯಮಶೀಲರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ನಿವೇಶನಕ್ಕೆ ಅರ್ಜಿ ಸಲ್ಲಿಸಿ ನಿವೇಶನವನ್ನು ಪಡೆದುಕೊಳ್ಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿವೇಶನವಾದಲ್ಲಿ ಅದಕ್ಕೆ ಸಂಬಂಧಿಸಿದ ಸಮಿತಿಯು ನಿವೇಶನವನ್ನು ಹಂಚಿಕೆ ಮಾಡುತ್ತದೆ.<br><br>4. ಉದ್ಯಮಶೀಲರು ನಿವೇಶನದ ಹಂಚಿಕೆ ಆದ ನಂತರ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸಿನ ನೆರವಿಗಾಗಿ ಬ್ಯಾಂಕ್/ ಕೆ.ಎಸ್.ಎಫ್.ಸಿ ಗೆ ಯೋಜನಾ ವರದಿ ಮತ್ತು ಇತರೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಸಾಲ ಮಂಜೂರಾತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.<br><br>5. ಕೈಗಾರಿಕಾ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ/ಸ್ಥಳೀಯ ಪ್ರಾಧಿಕಾರ ಯಿಂದ ನಕ್ಷೆ ಅನುಮೋದನೆ ಪಡೆದುಕೊಂಡು ಕಟ್ಟಡ ನಿರ್ಮಾಣ ಪ್ರಾರಂಭಿಸಬೇಕಾಗುತ್ತದೆ.<br><br>6. ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಎಸ್ಟಾಬ್ಲಿಷ್‌ಮೆಂಟ್" ಅನುಮತಿಯನ್ನು ಪಡೆಯಬೇಕಾಗುತ್ತದೆ.<br><br>7. ವಿದ್ಯುತ್ ಸಂಪರ್ಕಕ್ಕಾಗಿ ಸಂಬಂಧಿಸಿದ ಎಸ್ಕಾಂ ನಿಂದ ಮಂಜೂರಾತಿಯನ್ನು ಪಡೆಯಬೇಕಾಗುತ್ತದೆ. |

| | | |
|---|---|---|
| | | 8. ನೀರಿನ ಸಂಪರ್ಕಕ್ಕಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯಬೇಕಾಗುತ್ತದೆ.<br>9. ಚಟುವಟಿಕೆ/ಯಂತ್ರೋಪಕರಣಗಳನ್ನು ಆಧರಿಸಿ "ಫ್ಯಾಕ್ಟರೀಸ್ ಮತ್ತು ಬಾಯ್ಲರ್" ಇಲಾಖೆಯಿಂದ ಅನುಮತಿ ಪಡೆಯಬೇಕಾಗುತ್ತದೆ.<br>10. ಕಾರ್ಮಿಕರ ಸಂಖ್ಯೆಯನ್ನು ಆಧರಿಸಿ ಕಾರ್ಮಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳಬೇಕಾಗುತ್ತದೆ.<br>11. ಕಾರ್ಮಿಕರ ಸಂಖ್ಯೆ 20 ಕ್ಕೂ ಹೆಚ್ಚಾದಲ್ಲಿ ಇ.ಎಸ್.ಐ/ ಪಿ.ಎಫ್/ ವೃತಿ ತೆರಿಗೆ ನೊಂದಣಿ ಪಡೆಯಬೇಕಾಗುತ್ತದೆ.<br>12. ಉದ್ದೇಶಿತ ಕೈಗಾರಿಕೆಯ ವಾರ್ಷಿಕ ವಹಿವಾಟು ರೂ.40.00 ಲಕ್ಷಕ್ಕಿಂತ ಹೆಚ್ಚಾಗುವುದಿದ್ದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ "ಜಿ.ಎಸ್.ಟಿ" ನೊಂದಣಿ ಪಡೆಯಬೇಕಾಗುತ್ತದೆ.<br>13. ಆಹಾರ ಸಂಸ್ಕರಣಾ ಕೈಗಾರಿಕಾ ಚಟುವಟಿಕೆಯಾದಲ್ಲಿ "ಎಫ್.ಎಸ್.ಎಸ್.ಎ.ಐ" ರಹದಾರಿಯನ್ನು ಪಡೆಯಬೇಕಾಗುತ್ತದೆ.<br>14. ಅಪಾಯಕಾರಿ ಕೈಗಾರಿಕಾ ಚಟುವಟಿಕೆಯಾದಲ್ಲಿ "ಫೈರ್ ಸೇಫ್ಟಿ ಪ್ರಮಾಣಪತ್ರ" ವನ್ನು ಅಗ್ನಿಶಾಮಕ ಇಲಾಖೆಯಿಂದ ಪಡೆದುಕೊಳ್ಳಬೇಕಾಗುತ್ತದೆ.<br>15. ಕಟ್ಟಡ ನಿರ್ಮಾಣ, ಯಂತ್ರೋಪಕರಣಗಳ ಸ್ಥಾಪನೆಯಾದ ನಂತರ ಕೈಗಾರಿಕಾ ಚಟುವಟಿಕೆಯನ್ನು ಆಧರಿಸಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ಕನ್ಸೆಂಟ್ ಫಾರ್ ಆಪರೇಷನ್" ಅನುಮತಿಯನ್ನು ಪಡೆಯಬೇಕಾಗುತ್ತದೆ. |

ಸಿಐ 62 ಎಸ್‌ಎಸ್‌ಐ 2023

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು
ಸಾರ್ವಜನಿಕ ಉದ್ದಿಮೆ ಸಚಿವರು